ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ205/2021**

**ದಿನಾಂಕ 24.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಡಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಪಿ.ವಿ.ವೈ ವಕೀಲರಿಂದಃ

ನಾನು ವಾದಿಯ ಸೋದರ ಮಾವನ ಹೆಂಡತಿ. ನನ್ನ ಗಂಡ ತೀರಿಕೊಂಡಿದ್ದಾರೆ. ದಿ.28.08.2019 ರಂದು ನಾನು ವಾದಿಯಿಂದ ರೂ.1,00,000/- ಹಣವನ್ನು ಸಾಲವಾಗಿ ಪಡೆದಿದ್ದೆ ಎಂದರೆ ಸಾಕ್ಷಿ ವಾದಿ ಸಂಘದಿಂದ ರೂ.1,00,000/- ಹಣ ಸಾಲವಾಗಿ ಕೊಡಿಸುತ್ತೇನೆ ಎಂದು ಹೇಳಿದ್ದರಿಂದ ಸಹಿ ಪಡೆದಿದ್ದೇನೆ. ಸಂಘದಲ್ಲಿ ಸಾಲ ಕೊಡುತ್ತೇನೆ ಎಂದು ಹೇಳಿ ನಾನು ಸಹಿ ಮಾಡಿದ ದಾಖಲೆ ನಿಪಿ-1 ಆಗಿರುತ್ತದೆ. ಪತ್ರಬರಹಗಾರರಾದ ರುದ್ರಯ್ಯ ರವರ ಕಛೇರಿಯಲ್ಲಿ ಪ್ರಭಾಕರ್ ಮತ್ತು ಲೋಕೇಶ್ ರವರ ಸಮಕ್ಷಮ ನಿಪಿ-1 ಕ್ಕೆ ಸಹಿ ಮಾಡಿ ವಾದಿಯಿಂದ ರೂ.1,00,000/- ಹಣ ಪಡೆದಿದ್ದೇನೆ ಎಂದರೆ, ಸಹಿ ಮಾಡಿರುವುದು ಸರಿ, ಆದರೆ ಹಣ ಪಡೆದಿರುವುದಿಲ್ಲ. ಪ್ರಭಾಕರ್ ಮತ್ತು ಲೋಕೇಶ್ ರವರು ತಮ್ಮ ಸಾಕ್ಷ್ಯದಲ್ಲಿ ಅವರ ಸಮಕ್ಷಮವೇ ನಾನು ಹಣ ಪಡೆದು ನಿಪಿ-1 ಕ್ಕೆ ಸಹಿ ಮಾಡಿದ್ದೇನೆ ಎಂದು ನುಡಿದ್ದಾರೆ ಎನ್ನುವುದು ಸುಳ್ಳು. ನಾನು ಹಣ ಪಡೆದಿದ್ದರೂ ಹಣ ಪಡೆದಿಲ್ಲ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿಯ ಸೋದರ ಮಾವನ ಹೆಂಡತಿಯಾದ ಕಾರಣ ವಾದಿ ನನಗೆ ಮೋಸ ಮಾಡುವ ಅವಶ್ಯಕತೆ ಇಲ್ಲ ಎಂದರೆ ನ್ಯಾಯಾಲಯಕ್ಕೆ ಬಂದ ನಂತರವೇ ಅವರ ಬಗ್ಗೆ ನನಗೆ ತಿಳಿಯಿತು. ದಿ.19.02.2021 ರಂದು ವಕೀಲರ ಮೂಲಕ ವಾದಿ ನೋಟಿಸ್ ಕಳುಹಿಸಿದ್ದರು. ಅದನ್ನು ನಾನು ಪಡೆದಿದ್ದೇನೆ ಎಂದರೆ ಸರಿ. ಸದರಿ ನೋಟಿಸ್ ಗೆ ನಾನು ಉತ್ತರ ಕೊಟ್ಟಿರುವುದಿಲ್ಲ. ಆದರೆ ನನ್ನ ವಕೀಲರಿಗೆ ನೋಟಿಸ್ ಪ್ರತಿ ಕೊಟ್ಟಿರುತ್ತೇನೆ. ಶ್ರೀ ಶಕ್ತಿ ಸಂಘದಲ್ಲಿ ಹಣ ಕೊಡಿಸುತ್ತೇನೆ ಎಂದು ಸಹಿ ಪಡೆದಿದ್ದಾರೆ ಎಂದು ನಾನು ನನ್ನ ವಕೀಲರಿಗೆ

ತಿಳಿಸಿರುತ್ತೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಾಗಲಿ ಅಥವಾ ಲಿಖಿತ ಪತ್ರದಲ್ಲಾಗಲಿ ಈಗ ನಾನು ಮೇಲೆ ಹೇಳಿದ ಶ್ರೀಶಕ್ತಿ ಸಂಘದಲ್ಲಿ ಹಣ ಕೊಡಿಸುತ್ತೇನೆ ಎಂದು ವಾದಿ ಸಹಿ ಪಡೆದಿದ್ದಾರೆ ಎಂದು ಹೇಳಿಲ್ಲ ಎಂದರೆ ಹೇಳಿದ್ದೇನೆ. ನಾನು ಸಾಕ್ಷಿದಾರರ ಮುಂದೆ ಹಣ ಪಡೆದಿದ್ದರೂ ಈಗ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ